



ಅರುಣ ಪಿ. ಭಟ್ಟ

# ವಾರಭವಿಷ್ಯ 6.8.2020ರಿಂದ 12.8.2020ರವರೆಗೆ




ಅಷ್ಟಮದಲ್ಲಿ ಗುರು, ಚಂದ್ರ ಯೋಗ. ಆಶ್ಚರ್ಯಕರ ಫಲ ನೀಡುತ್ತದೆ. ಅರ್ಧಕ್ಕೆ ನಿಂತ ಕೆಲಸಗಳು ಮುಂದುವರೆಯುತ್ತವೆ. ಮಂಗಳ ರಾಶಿ ಭ್ರಮಣ ಬಂಧುಗಳಲ್ಲಿ ಸದ್ಭಾವನೆ ಮೂಡಿಸುವುದು. ನೆಗಡಿ, ಶೀತ, ಜ್ವರದಿಂದ ಪೀಡೆ. ವಾಹನ ಸೌಖ್ಯ. ಸಣ್ಣಪುಟ್ಟ ವ್ಯಾಪಾರದಲ್ಲಿ ಲಾಭ. ತಾಯಿಗೆ ಅನುಕೂಲ. ನೀರಿನ ಸಮಸ್ಯೆ ಬಗೆಹರಿಯುವುದು. ಶುಭದಿನ 12. ಶನಿಪೀಡೆ ನಿವಾರಣೆಗೆ ಪೂಜೆ ಪ್ರಾರ್ಥನೆ ಮಾಡಿರಿ.




ಪ್ರಾರಂಭದಲ್ಲೇ ವಿಶೇಷ ವಸ್ತು ಖರೀದಿ. ಪತಿ ಪತ್ನಿಯರ ಆರೋಗ್ಯ ಸ್ಥಿರವಾಗಿರುವುದು ಸ್ಪರ್ಧಾತ್ಮಕತೆಯಲ್ಲಿ ಯಶಸ್ಸು. ಯಂತ್ರ ಮತ್ತು ವಾಹನಗಳಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಎಚ್ಚರಿಕೆ ಅಗತ್ಯ. ಬಂಧು ಜನರಲ್ಲಿ ವೈಮನಸ್ಸು ಸಾಧ್ಯತೆ. ಕುಟುಂಬಕ್ಕಾಗಿ ಖರ್ಚು ಹೆಚ್ಚಾಗಬಹುದು. ಆರ್ಥಿಕ ಸ್ಥಿತಿಗತಿಯಲ್ಲಿ ಸುಧಾರಣೆ. ಪ್ರವಾಸ ಸಾಧ್ಯತೆ. ಶುಭದಿನ 11. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಕೌಟುಂಬಿಕ ಸಮಸ್ಯೆ ಬಗೆಹರಿಯುವುದು. ನಿಮ್ಮ ಕೆಲಸಕಾರ್ಯಗಳಿಗೆ ನೆರವು ನೀಡಲು ಹೊಸ ಸೇವಕರು ಸಿಗುವರು. ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಳ್ಳಬಹುದು. ನರದಲ್ಲಿ ನೋವು ಕಾಣಿಸುವ ಸಂಭವ. ಬಂಧುಗಳ ವಿರೋಧ ಎದುರಿಸಬೇಕಾಗಬಹುದು. ವಾರಾಂತ್ಯದಲ್ಲಿ ಸಣ್ಣ ಪ್ರವಾಸ. ವ್ಯಾಪಾರದಲ್ಲಿ ನಷ್ಟ ಸಂಭವ. ವಿನಾಕಾರಣ ಹೆದರಿಕೆ. ಶುಭದಿನ 12. ಶನಿಸ್ತೋತ್ರ ಮಾಡಿರಿ. ಹನುಮಾನ್ ಚಾಲಿಸ್ ಪಠಿಸಿ.




ಆರೋಗ್ಯ ಸುಧಾರಿಸುವುದು. ಆಕಸ್ಮಿಕ ಖರ್ಚು ಸಂಭವಿಸುವ ಸಂದರ್ಭ ಎದುರಾಗುತ್ತದೆ. ಆಸ್ತಿ ಖರಿದಿ ಬಗ್ಗೆ ಚಿಂತನೆ ಮಾಡಲಿದ್ದೀರಿ. ಕಲಾವಿದರಿಗೆ, ಸಾಹಿತಿಗಳಿಗೆ ಉತ್ತಮ ವಾರ. ರಾಜಕೀಯದವರಿಗೆ ಒಳ್ಳೆಯ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತಗರುಗಳು ಹಿಂದೆ ಸರಿಯುವರು. ದೇಹ ಮನಸುಗಳ ಆರೋಗ್ಯ ಚೈತನ್ಯಶೀಲವಾಗಿರುತ್ತದೆ. ಶುಭದಿನ 8. ಚಂಡಿ ಪಾರಾಯಣ ಮಾಡಿರಿ.




ಕುಟುಂಬದಲ್ಲಿ ಸಂತೋಷದ ವಾತಾವರಣ. ನಿಮ್ಮಲ್ಲಿ ನವೋಲ್ಲಾಸ ಬರುವುದು. ಧಾನ–ಧರ್ಮಕ್ಕಾಗಿ ಖರ್ಚು ಮಾಡಲಿದ್ದೀರಿ. ಮಿತ್ರರಿಗೆ ಸಹಾಯ. ಹಲವು ದಿನಗಳಿಂದ ಕಾಡುವ ಜಾಡ್ಯ ಬಗೆಹರೆಯುವುದು. ಹೊಟ್ಟೆನೋವು ಕಾಡಬಹುದು. ಕೌಟುಂಬಿಕ ಮನಸ್ತಾಪಗಳು ದೂರವಾಗುತ್ತದೆ. ಶುಭದಿನ 10. ಕೆಂಪು ಹವಳ ಧಾರಣೆ ಮಾಡಿರಿ. ಶಿವ ಕವಚ ಓದಿರಿ.




ಆಕಸ್ಮಾತ್ ಖರ್ಚು ಹೆಚ್ಚಾಗುವ ಸಂದರ್ಭ ಎದುರಾಗಬಹುದು. ಕಾಲಿಗೆ ನೋವು ಉಂಟಾಗಬಹುದು. ಅಪವಾದದ ಭಯ ಕಾಡಲಿದೆ. ಅಧಿಕಾರಿಗಳ ಕೆಂಗಣ್ಣು ಬೀಳಬಹುದು. ಆದರೆ ವ್ಯಾಪಾರದಲ್ಲಿ ಅಧಿಕ ಲಾಭವಾಗಲಿದೆ. ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರರ ಸಹಾಯ. ಶುಭದಿನ 11. ಮಾರುತಿಗೆ ಮುಖ ನೋಡಿದ ಎಣ್ಣೆ ನೀಡಿರಿ.




ವೃತ್ತಿ– ವ್ಯವಹಾರದಲ್ಲಿ ಲಾಭ ವ್ಯಾವಹಾರಿಕ ಅನುಕೂಲತೆಗಳು ಹೆಚ್ಚಲಿವೆ. ಸರಕಾರಿ ಕೆಲಸ ಶೀಘ್ರದಲ್ಲಿ ಆಗುವುದು. ತಂದೆ ತಾಯಿಯವರ ಆರೋಗ್ಯದಲ್ಲಿ ಸುಧಾರಣೆ. ನಿಮ್ಮ ಕೆಲಸಗಳಿಗೆ ಮನ್ನಣೆ. ದೂರ ಪ್ರವಾಸ ಸಂಭವ ಇದೆ. ಕಲಾವಿದರಿಗೆ– ಸಂಗೀತಗಾರರಿಗೆ ಒಳ್ಳೆಯ ಅವಕಾಶಗಳು ಸಿಗಲಿವೆ. ಶುಭ ಸುದ್ದಿಯ ಭಾಗ್ಯವಿದೆ. ಶುಭದಿನ 10. ಚಾಮುಂಡಿ ಸ್ತುತಿ, ವನದುರ್ಗಾ ಜಪ ಮಾಡಿರಿ.




ನಿರೀಕ್ಷಿತವಾಗಿ ಅಧಿಕಾರದಲ್ಲಿ ಉನ್ನತ ಅವಕಾಶ ಸಿಗಲಿದೆ. ಅಧಿಕಾರಿಗಳಿಗೆ ಪದೋನ್ನತಿಯ ವಾರ. ಬರಬೇಕಾದ ಹಣ ಬರುತ್ತದೆ. ನಿಮ್ಮ ಕುಟುಂಬ ವರ್ಗದವರ ತಿರುಗಾಟ ಹೆಚ್ಚಾಗುತ್ತದೆ. ಎಲ್ಲ ರೀತಿಯಲ್ಲಿ ಆರೋಗ್ಯವಾಗಿರುತ್ತೀರಿ. ಕೌಟುಂಬಿಕವಾಗಿ ಅಧಿಕ ಖರ್ಚು ಆಗಲಿದೆ. ಕಣ್ಣಿನ ಸಮಸ್ಯೆ ಕಾಣಿಸುವ ಸಂಭವ ಇದೆ. ಶುಭದಿನ 6. ಪುಷ್ಯರಾಗ ರತ್ನ ಧಾರಣೆ ಮಾಡಿರಿ. ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.




ಸಮಸ್ಯೆಯ ತೂಗುಕತ್ತಿಯ ಭಯ ದೂರಾಗುವುದು. ಮಕ್ಕಳ ವಿದೇಶ ಪ್ರವಾಸಕ್ಕೆ ಸಿದ್ಧತೆ ಮಾಡುತ್ತೀರಿ. ಆಕಸ್ಮಾತ್ ಲಾಭ ಸಂಭವ ಇದೆ. ಕಣ್ಣು, ಕಿವಿ, ನೋವು. ಮನೆಯ ಹೊರಗಡೆ ವಾಸ. ನದಿಯ ಪಾತ್ರದಲ್ಲಿ ಪ್ರವಾಸ ಮಾಡುವಾಗ ಎಚ್ಚರವಹಿಸಿ. ಸಭೆ ಸಮಾರಂಭಗಳಲ್ಲಿ ಮಾನ್ಯತೆ. ಉತ್ತಮ ಭಾಷಣ ಮಾಡುವಿರಿ. ಶುಭದಿನ 9. ಅಷ್ಟಮ ರವಿ ತೊಂದರೆ ನಿವಾರಣೆಗೆ ಆದಿತ್ಯ ಹೃದಯ ಪಠಿಸಿರಿ.




ತಾಯಿಗೆ ಆಕಸ್ಮಾತ್ ಬೇನೆ ಕಾಡಬಹುದು. ಜಮೀನಿನ ಕೆಲಸಗಾರರು ಕೈಕೊಡುವರು. ವಾಹನ ಅಪಘಾತ ಭಯ. ಮಿತ್ರರಿಂದಲೂ ಅಪವಾದ ಸಾಧ್ಯತೆ. ಸ್ಪರ್ಧಾತ್ಮಕ ವಿಷಯದಲ್ಲಿ ಅಚಾನಕ್ ಯಶಸ್ಸು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಸಿಗಲಿದೆ. ಸ್ಟೇಶನರಿ ಖರೀದಿಯಲ್ಲಿ ಲಾಭ. ಅಳಿಯಂದಿರ ಆಗಮನ. ಶುಭದಿನ 10. ಗಣಪತಿಗೆ 108 ಮೋದಕ ನೈವೇದ್ಯ ಮಾಡಿರಿ.




ಅಧಿಕಾರಿಗಳಿಗೆ ಪೂರ್ವದಿಕ್ಕಿಗೆ ವರ್ಗಾವಣೆ ಆಗಬಹುದು. ಸ್ತ್ರೀಯರಲ್ಲಿ ಅನಾರೋಗ್ಯ ಸಮಸ್ಯೆ ಕಾಡುತ್ತದೆ. ಮನೆಯನ್ನು ಬದಲಾವಣೆ ಪ್ರಕ್ರಿಯೆ ಆರಂಭ. ವಾರಾಂತ್ಯದಲ್ಲಿ ಧನಲಾಭ ಆಗಲಿದೆ. ರಾಜಕೀಯ ಚಟುವಟಿಕೆಯಲ್ಲಿ ಹಿನ್ನಡೆ ಉಂಟಾಗುವ ಸಾಧ್ಯತೆ ಇದೆ. ಕೆಂಪುಬಣ್ಣದ ಯಂತ್ರಗಳ ಖರೀದಿಗೆ ಸುಸಮಯ. ಶುಭದಿನ 9. ಶತ್ರುಕಾಟ ನಿವಾರಣೆಗೆ ವಿಷ್ಣು ಸಹಸ್ರನಾಮ ಪಠಿಸಿರಿ.




ಕುಟುಂಬದಲ್ಲಿಯ ಸದಸ್ಯರ ವಿರೋಧ. ಪ್ರಯತ್ನಪೂರ್ವಕವಾಗಿ ಬರಬೇಕಾದ ಬಾಕಿಯನ್ನು ವಸೂಲಿ ಮಾಡುತ್ತೀರಿ. ಮಕ್ಕಳು ಒಳ್ಳೆಯ ಹೆಸರನ್ನು ಸಂಪಾದಿಸುವರು. ಷೇರು ವ್ಯವಹಾರಗಳಲ್ಲಿ ಅಧಿಕ ಲಾಭ. ಹೃದಯಸಂಬಂಧಿ ಕಾಯಿಲೆ ಇರುವವರು ಎಚ್ಚರಿಕೆಯಿಂದಿರಿ. ಚಿಕ್ಕ ಪ್ರವಾಸ ಕೈಗೊಳ್ಳುತ್ತೀರಿ. ಶುಭದಿನ 8. ಸ್ತ್ರೀಯರು ಬಿಳಿ ಮುತ್ತನ್ನು, ಪುರುಷರು ಕೆಂಪು ರತ್ನವನ್ನು ಧಾರಣೆ ಮಾಡಿರಿ.